ಯೋಜನೆಗೆ ನೀಡಲಾಗಿತ್ತೆಂದು ಆಕ್ಷೇಪಿಸಿರುವುದರಿಂದ ಜಾಗದ ವಿಷಯವು ತಕರಾರಿನಲ್ಲಿದೆ.

ಇ) ಈ ಜಾಗದ ತಕರಾರು ಬಗೆಹರಿದ ತಕ್ಷಣವೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿಷಯ:- ಶಿಕಾರಿಪುರ ನೀರು ಸರಬರಾಜು ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 210 (220)

ಶ್ರೀ ಬಿ.ಯಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿಕಾರಿಪುರ ನೀರು ಸರಬರಾಜು ಯೋಜನೆಯು ಸರ್ಕಾರದಿಂದ ರೂ.90 ಲಕ್ಷಗಳಿಗೆ ಮಂಜೂರು ಆಗಿರುವುದು ನಿಜವೆ?

ಆ) ಈ ಯೋಜನೆಯ ಅನುಷ್ಠಾನಕ್ಕೆ ಏನುಕ್ರಮ ಕೈಗೊಳ್ಳಲಾಗಿದೆ?

ಇ) ಪುರಸಭೆಯ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದೆ ಇರುವುದರಿಂದ ಪುರಸಭೆಯ ಪಾಲಿನ ವಂತಿಗೆ ನೀಡಲು ಸಾಧ್ಯವಿಲ್ಲದೆ ಇರುವುದರಿಂದ ಸರ್ಕಾರ ತಾನು ಪುರಸಭೆಗೆ ನೀಡುವ ಅನುದಾನದಲ್ಲಿ ಕಡಿತಗೊಳಿಸಿ ನೀರು ಸರಬರಾಜು ಯೋಜನೆ ಪ್ರಾರಂಭಿಸಲು ಸಾಧ್ಯವಿಲ್ಲವೇ? ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ದಿನಾಂಕ:25-11-1995ರ ಸರ್ಕಾರಿ ಆದೇಶದಲ್ಲಿ ರೂ.86.04 ಕೋಟಿಗಳ ವೆಚ್ಚದಲ್ಲಿ ರಾಜ್ಯದ 29 ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ ಮಂಜೂರಾತಿ ನೀಡಿದ್ದು ಇವುಗಳ ಪೈಕಿ ಶಿಕಾರಿಪುರ ಪಟ್ಟಣವು ಸೇರಿರುತ್ತದೆ.

ಇ) ಹಾಲಿ ಆರ್ಥಿಕ ಮಾದರಿಯಂತೆ ಪುರಸಭೆಯು ಅಂದಾಜಿನ ಮೊತ್ತದ ಶೇ.15ರಷ್ಟು ಅಂದರೆ 13.50 ಲಕ್ಷ ರೂ.ಗಳನ್ನು ಪಾವತಿ ಮಾಡಬೇಕು. ಆದರೆ ಕುಡಿಯುವ ನೀರಿನ ಯೋಜನೆಗಳಿಗೆ ಆರ್ಥಿಕ ಮಾದರಿಯನ್ನು ಪರಿಷ್ಕರಿಸುವ ಪ್ರಸ್ತಾವನೆ ಬಗ್ಗೆ ಸರ್ಕಾರವು ಅಂತಿಮ ತೀರ್ಮಾನ ತೆಗೆದುಕೊಂಡ ನಂತರ ಪುರಸಭೆಯವರ ಪಾಲು ಸಾಕಷ್ಟು ಕಡಿಮೆ ಆಗುವ ಸಂಬಂಧಿಪಿದ್ದು ಈ ಬಗ್ಗೆ ಶೀಘ್ರದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು:- ಪ್ರಶ್ನೋತ್ತರ ಕಾಲ ಮುಗಿಯಿತು.